ಜನಸಾಗರದಲ್ಲಿ ಕಣ್ಣು ಕಟ್ಟಿ ಕಾಡಿಗೆ ಬಿಟ್ಟಂತಾಗಿತ್ತು.

ಮಡಿಲಿನಲ್ಲಿದ್ದ ಮಗುವಿಗಾಗಿ ಹೊಟ್ಟೆಯ ಸಂಕಟಕ್ಕಾಗಿ ಕೆಲಸ ಮಾಡಲೇಬೇಕಿತ್ತು. ಅವರಿವರ ಮೂಲಕ ನಾಲ್ಕಾರು ಮನೆ ಕೆಲಸ ಸಿಕ್ಕಿದ ಮೇಲೆ ತನ್ನಿಂತಾನೇ ಗಟ್ಟಿಯಾಗಿದ್ದಳು. ಮಗಳು ದೊಡ್ಡವಳಾಗಿ ತನ್ನ ಕಾಲಮೇಲೆ ತಾನು ನಿಂತ ಮೇಲೆ ಸರಳವಾಗಿ ಮದುವೆ ಮಾಡಿದ್ದಳು. ಅಳಿಯ, ಮಗಳು, ಮೊಮ್ಮಗನ ಜೊತೆಗೆ ಸಂಸಾರ ನೆಮ್ಮದಿಯಾಗಿತ್ತು.

ಮತ್ತೆ ಹಿಂದಿರುಗಿ ಬಂದ ಗಂಡನನ್ನು ಮನೆಗೆ ಸೇರಿಸಲಿಲ್ಲ. ಅವನು ಮತ್ತೆಲ್ಲಿಗೋ ಹೊರಟು ಹೋಗಿದ್ದ. ಇಂತಹ ತಾಯಮ್ಮನಿಗೆ ತಾಯಿಯ ಫೋನ್ ಕರೆ ಕೊಂಚ ವಿಚಲಿತಳಾಗಿಸಿತ್ತು.

'ಆಯ್ತು ತಾಯಮ್ಮ ಹೋಗಿ ಬಾ... ಅಪರೂಪಕ್ಕೆ ಊರಿಗೆ ಹೋಗ್ತಿದ್ದೀಯಾ... ಬೇಕಾದ್ರೆ ಎರಡು ದಿನ ನಿಂತು ಬಾ... ಪರ್ವಾಗಿಲ್ಲ... ಹಣ ಏನಾದ್ರೂ ಬೇಕಿತ್ತಾ...' ಅಂತಂದಾಗ ಖುಷಿಯಿಂದ ಕಣ್ಣರಳಿಸಿದ್ದಳು.

'ಬ್ಯಾಡಾ... ನನ್ನತ್ರ ಐತೆ ಕಣಕ್ಕ. ಇಂಗಿಂದಿಂಗೆ ಮಾರ್ಕೆಟ್‌ಗೆ ಹೋಗಿ– ನಮ್ಮವ್ವಂಗೆ ಸೀಡ್‌ಲೆಸ್ ದ್ರಾಕ್ಷಿ ಕಂಡ್ರೆ ಬೋಪ್ರೀತಿ... ಹಲ್ಲು ಇಲ್ಲ ಅವ್ವಿಗೆ... ಅದನ್ನ ತಕಂಡು ಬರಬೇಕು. ಅಂಗೆಯಾ ಜಿಲೇಬಿ ಅಂದ್ರೂ ಆಸೆ... ನನ್ನ ತಮ್ಮನ ಮಕ್ಕಳಿಗೆ ಕೇಕು, ಬಿಸ್ಕತ್ತು... ಅಂಗೇ ವಸೀ ಮನೆ ಸಾಮಾನು ಎಲ್ಲ ತಕ್ಕಂಡು ಓಯ್ತೀನಿ... ಕಣಕ್ಕ... ಎರ್ಡು ದಿನಕ್ಕೆ ಬಂದ್‌ಬಿಡ್ತೀನಿ...' ಎಂದಳು. ತವರಿಗೆ ಹೊರಡುವ ಸಂಭ್ರಮದಲ್ಲಿ ಅವಳ ಮುಖದಲ್ಲಿ ಜಿಂಕೆಯ ಮರಿಯ ಎಳೆತನದ ಜಿಗಿದಾಟವಿತ್ತು.

★★★

'ಏನ್ ತಾಯಮ್ಮ ಎರಡು ದಿನ ಇದ್ದು ಬರ್‌ತೀನೀ ಅಂತಂದೆ. ಒಂದೇ ದಿನಕ್ಕೆ ಬಂದ್ ಬಿಟ್ಟಿದ್ದೀಯಲ್ಲ...' ಕಾಲಿಂಗ್ ಬೆಲ್ ಸದ್ದಾದಾಗ ಬಾಗಿಲು ತೆರೆದು ಎದುರಿಗೆ ನಿಂತ ತಾಯಮ್ಮನಿಗೆ ಅಂದೆ. ಅವಳ ಮುಖ ಕೊಂಚ ಮಂಕಾಗಿತ್ತು.

'ಹೂಂ ಕಣಕ್ಕ... ಬಂದೇ...' ಅನ್ನುತ್ತಲೇ ಕೆಲಸಕ್ಕೆ ತೊಡಗಿಕೊಂಡಳು. ಅವಳ ಕೆಲಸದಲ್ಲಿ ಮೂಗು ತೂರಿಸಲಿಲ್ಲ.

ಕೊಂಚ ಹೊತ್ತಿನ ಮೌನದ ನಂತರ ಪಾತ್ರೆ ತೊಳೆಯಲು ಸಿಂಕ್‌ನ ಬಳಿಗೆ ಬಂದಳು. ಯಾಕೋ ಸೆರಗಿನಿಂದ ಕಣ್ಣೊತ್ತಿಕೊಂಡಳು.

'ನಿಮ್ಮಮ್ಮ ಚೆನ್ನಾಗಿದಾರೆ ತಾನೇ... ಯಾಕೆ ಮಂಕಾಗಿದ್ದೀಯಾ...' ಅಂತಂದೆ.

'ಬುಡಕ್ಕ... ಯಾವುದಕ್ಕೂ ಆಸೆ ಮಾಡ್‌ಬಾರ್ದು... ನಾವು ನನ್ನ ತಮ್ಮ– ತಮ್ಮನ ಮಕ್ಳು ಅಂತ ಎಷ್ಟು ಆಸೆ ಪಟ್ಟು ಬೇಕಾದ್ದು–ಬೇಡವಾದ್ದು ಎಲ್ಲ ತಕಂಡು ಓಗಿರ್‌ತೀವಿ... ನಮಗಿರೋ ಅಕ್ಕರಾಸ್ಥೆನಲ್ಲಿ ಅವ್ರಿಗೆ ಕಾಲುಭಾಗಾನೂ ಇರಾಕಿಲ್ವಲ್ಲ... ಯಾಕಿಂಗೆ?... ಹೊಟ್ಟೆ ಉರಿದು ಹೋಯ್ತದೆ... ಕಣಕ್ಕ, ಕಣ್ಣಲ್ಲಿ ನೀರು ಬತ್ತದೆ...'

'ಅಲ್ಲ... ಇಲ್ಲಿಂದ ಒತ್ತಾರೆಗೇ ಎದ್ದು– ಬೇಕಾದ್ದು ಬ್ಯಾಡವಾದ್ದು ಎಲ್ಲ ಹೊತ್ಕಂಡು ಗಂಟೆಗಟ್ಟಲೆ ಬಸ್ಸಿಗೆ ಕಾಯ್ದು... ಊರಿಗೆ ತಲುಪಿದಾಗ ಬೆಳಿಗ್ಗೆ 10 ಗಂಟೆ ಕಣಕ್ಕ. ಬಸ್ಸಿಂದ ಇಳಿತಿದ್ದಂಗೆ ನೋಡ್ತೀನಿ... ನನ್ನ ತಮ್ಮನ ಹೆಂಡತಿ– ತಮ್ಮ ಅದೇ ಬಸ್ಸಿಗೆ ಹತ್ತಕ್ಕೆ ಕಾಯ್ತಾ ನಿಂತವ್ರೆ... ಇದ್ಯಾಕ್ಲ ತಮ್ಮಯ್ಯ... ಅವ್ವ ಫೋನ್ ಮಾಡಿತ್ತಲ್ಲ... ನಾನು ನಿನ್ನೆನೇ ಫೋನ್ ಮಾಡಿದ್ನಲ್ಲ ನಿಂಗೆ... ನೀನೆತ್ಲಾಗಿ ಓಗ್ತಾ ಇದೀಯಾ...' ಅಂತಂದೆ. ಅದಕ್ಕೆ ಅವನು ನಗಾಡ್‌ಬಿಟ್ಟ. 'ಆ ಮುದ್ಕಿಗೇನೋ ಅರಳು ಮರಳು. ಫೋನ್ ಮಾಡ್ತಾನೇ ಇರ್ತದೆ... ನೀನ್ಯಾಕೆ ಬಿದ್ದಾ ಬಿದ್ದಾ ಬೀಳಾ ಓಡ್ ಬಂದೀಯೇ... ನಾನು ನನ್ನ ನಾದಿನಿ ಮನೇಲಿ ನಾಮಕರಣ. ಅದಕ್ಕೆ ಎಲ್ಲೂ ಓಯ್ತಾ ಇದೀವಿ... ಓಗು ಮನೆಗೆ... ಅವ್ವ